Regd No M 1299 34 th Year ತಾ|| 25—8—51

SATYAVADI

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಸೈ

ದಿವ್ಯವಾಣಿ

ಜೀವನಕ್ಕೆ ಜೇಸತ್ಯರೂ ಸಾಮುಲು ಒಲ್ಲದವರ ಜೀವನ ನಿರರ್ಥಕವಾದುದ ಅವರು ಒದುಕಿದ್ದರೆನ್ನುವುದಕ್ಕಿಂತ ಬರಿ ಉಸಿರಾಡಿಸುತ್ತಿದ್ದರೆಂದು ಹೇಳುವುದು ಸರಿಯಾದೀತು.

— ಕ್ಲೆರೆಂಡನ್.

ಭಾರತದಿಂದ ಈ ಸಾಲಿಗೆ ಕೆಂಪು ಚೀಣಾಕ್ಕೆ ಇಪ್ಪತ್ತು ದಶ ಲಕ್ಷ ಗಜ ಬಟ್ಟೆಯನ್ನು ರಫ್ತು ಮಾಡಲಾಗುವದೆಂದು ಬೊಂಬಾಯಿ ವರದಿ ತಿಳಿಸಿದೆ

ಮೈಸೂರು ಸಿಟಿ ಕೋ—ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಸಲವತ್ತನೆಯ ವಾರ್ಷಿಕ ಸಾಧಾರಣ ಸಭೆಯು ಮುಂದಿನ ಮಾಹೆ 9 ನೇ ತಾ|| ಮಧ್ಯಾಹ್ನ 3 ವರೆ ಗಂಟೆಗೆ ಸರಿಯಾಗಿ ಸಾಹುಕಾರ್ ಲಾವ್ ಬಹದ್ದೂರ್ ಧರ್ಮಸ್ಕಾಶಡಿ ಬಸವಯ್ಯನವರ ಇಂಟರ್‌ಮೀಡಿಯೆಟ್ ಕಾಲೇಜು ಸಭಾಂಗಣದಲ್ಲಿ ನಡೆಯುವುದು

ಗಡಿನಾಡಿನ ಮುಖ್ಯ ಮಂತ್ರಿ ಖಾನ್ ಅಬ್ದುಲ್ ಖಯ್ಯುಂ ಖಾನ್ ಮೊನ್ನೆ ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡಿತ್ತಾ ಪಾಕಿಸ್ತಾನದ ವೈರಿ ಆಗಿದ್ದ ಈಗಲೂ ವಿರೋಧಿ ಆಗಿರುವ ಖಾನ್ ಅಬ್ದುಲ್ ಗಫಾರ್ ಖಾನಂವರನ್ನು ಒಲಾಸೆ ಮಾಡಲು ಹೇಳುವದು ಪಂ|| ನೆಹರುವಿಗೆ ಹಕ್ಕಿಲ್ಲದುದು ಎಂದು ತಿಳಿಸಿದರೆಂದು ಲಾಹೋರ್ ವಾರ್ತೆ ತಿಳಿಸುತ್ತದೆ.

ಮುಷ್ಕರ ಬ್ಯಾಲೆಟ್ ತೆಗೆದುಕೊಳ್ಳುವುಗೆಗೆ ರಿಸರ್ವ್ ಬ್ಯಾಂಕ್ ಕಾರ್ಮಿಕ ಸಂಘದ ಕಾರ್ಯಪುಂ ಶಾಖೆ ಅಂಗೀಕರಿಸಿದೆ

ಕೈಕಚ್ಚಿದೆ

ಮಧ್ಯಪ್ರದೇಶ ಸರ್ಕಾರಕ್ಕೆ ಖರ್ಜೂ ವ್ಯಾಪಾರ ಕೈಕಚ್ಚಿದೆ

ಮೊಕದ್ದಮೆ

ತುಮಕೂರಿನಲ್ಲಿ ಹಾರ್ಡಿಕ್ಸ್ ನಗದಿ ಬೆಲೆ ವಿಚಾರ ಮಾಡಿದವರೋರ್ವರ ಮೇಲೆ ಮೊಕದ್ದಮೆ ಹೂಡಲಾಗಿದೆ

† ಗುಬ್ಬಿ ತಾಲ್ಲೂಕಿನ ಇಂದಿರಗೆರೆಯ ಶಿವರುದ್ರಮ್ಮ ಎಂಬವಳ ಕೊಲೆ ಆಗಿ ಹೆಣವನ್ನು ಗೋಣಿ ಚೀಲದಲ್ಲಿ ಕಟ್ಟಿ ಕಲ್ಲೂರು ತಾಲ್ಲೂಕು ಕೆರೆಗೆಸೆದಿರುವದು ಪತ್ತೆ ಆಗಿ ಈ ಸುದರ್ಭದಲ್ಲಿ ಅವಳ ಪತಿ ರಾಮಯ್ಯನ ಬಂಧನವಾಗಿದೆ

* ಬುದಿಕೋಟೆ ಸವಿಾಸದಲ್ಲಿರು ವೆಲಸಂದ್ರ ಗ್ರಾಮದಲ್ಲಿ 9 ಮನೆಗಳು ಮನ್ನೆ ಬೆಂಕಿಗೀಡಾಗಿ ನಾಲ್ಕುವರೆ ಸಹಸ್ರ ರೂ ನಷ್ಟವಾಗಿರುವದಾಗಿ ಬಂಗಾರು ಪೇಟೆ ವಾರ್ತೆ

‡ ಭಾಷಾವಾರು ಪ್ರಾಂತ ರಚನೆಗೆ ಕೂಡಲೇ ಗಡಿ ಸಮಿತಿ ರಚಿಸಬೇಕೆಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನ ಸಮಿತಿ ಒತ್ತಾಯ ಮಾಡಿರುವದಾಗಿ ಹುಬ್ಬಳ್ಳಿ ವಾರ್ತೆ

‡ ಬೊಂಬಾಯಿನಲ್ಲಿ ಹೊಸದಾಗಿ ಸ್ಥಾಪಿತವಾದ ನಾಗರೀಕ ಆತ್ಮಗೌರವ ಸಂಘ ಸಚಿವ ಶ್ರೀ ಮೊರಾರ್ಜಿ ವಸುಸ್ಯ ಕಡಿದಾಗ ಸಶುವಾಗಿ-ತ್ಯಾನೆ ಎಂದು ಹೇಳಿಕೆ ಇತ್ತಬಗ್ಗೆ ತೀವ್ರ ಪ್ರತಿಭಟಿಸಿದೆ

* ಸರ್ಕಾರ ರೈಲ್ವೆ ಮುಷ್ಕರ ನಡೆಯುದಿರುವ ಬಗೆಗೆ ಒಸ್ಪಂದಕ್ಕೆ ಬರಬಹುದೆಂದು ಶ್ರೀ ಜಯಸ್ಕಾಶರು ಪಾಟ್ನದಲ್ಲಿ ತಿಳಿಸಿರುವರು

ತವಡು ಸಹಿತ ಅಕ್ಕಿ ತಿಂದರೆ ಹಾನಿಯೇನೂ ಇಲ್ಲ ಎಂದು ಕಾಂಗ್ರೆಸ ಅಧ್ಯಕ್ಷ ಶ್ರೀ ತಾಂಡಸ್ಸರು ಬೀಷಸನ ಅಕ್ಕಿ ತೋರಿಸಿದ ಕಸಬೀಕರು ಎಂಬ ವಹಿಳೆಗೆ ತಿಳಿಸಿದರೆಂದು ಕಾರವಾರ ವಂದಿ

× ಕಮ್ಯುನಿಸ್ಟ ಪ್ರತಿನಿಧಿಗಳ ಕೊಲೆ ಪ್ರಯತ್ನದ ಅಪಾದನೆ ಮೇಸನದ ನಾಟಕವೆಂದು ಅಧ್ಯಕ್ಷ ಟ್ರೂಮನ್ ತಿಳಿಸಿರುವದು ಕೇಸಾಗಿನಲ್ಲಿ ತಮ್ಮ ಕೊಲೆಯತ್ನ ನಡೆದಿತ್ತೆಂದು ಕಮ್ಯುನಿಸ್ಟರು ಹೇಳಿಕೆ ಇದೆ

ಪಾಕಿಸ್ತಾನದ ಕೋಮುವಾದಕ್ಕೆ ಬಲಿಯಾಗದಿರಿ!

ಪಿಯೂಗುಂಪಿಗೆ ರಾಂಪುರ ನವಾಬ್ ಹಿತೋಕ್ತಿ

ಲಕ್ನೋ : ಇತಿಹಾಸ ಪ್ರಸಿದ್ಧ ಕೈಸರಬಾಗ ಬರದಾಯಿಯಲ್ಲಿ ನಿನ್ನೆ ಅಖಿಲ ಭಾರತ ಪಿಯೂ ಸಂಮೇಳನ ರಾಂಪುರ ನವಾಬರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಸಂಮೇಳನ 3 ದಿನ ನಡೆಯುವದು ಭಾರತಾದ್ಯಂತ ಇನ್ನೂರು ಮಂದಿ ಪ್ರತಿನಿಧಿಗಳು ಬಂದಿರುವರು ಸಂಮೇಳನಕ್ಕೆ ಯಶಸ್ಸು ಕೋರಿ ರಾಜೇಂದ್ರಬಾಬು, ಪಂ|| ನೆಹರು ಸಂದೇಶ ಕಳಿಸಿದ್ದರು ರಾಂಪುರ ನವಾಬ ಸೈಯದ್ ಅಲಿ ರಜಾ ಖಾನರು ಭಾಷಣ ಮಾಡುತ್ತಾ — ಕಾಶ್ಮೀರ ಪ್ರಶ್ನೆ ಬಗೆಗೆ ಪಾಕಿಸ್ತಾನದ ಅಸತ್ಯ ನಿಲುವು ಸಾಧಾರಣವಾಗಿ ಭಾರತ ಮುಸ್ಲಿಮರಿಗೆ ವಿಶೇಷವಾಗಿ ಪಿಯೂಗಳಿಗೆ — ಕಾಶ್ಮೀರದಲ್ಲಿ ಪಿಯೂಗಳು ಹೆಚ್ಚಿರುವದರಿಂದ, ತೀವ್ರ ಆತಂಕ ವುಂಟುಮಾಡಿದೆ ಎಂದರು ಅವರು ಪಿಯೂಸಂಗಡಕ್ಕೆ ಮನವಿ ಮಾಡಿಕೊಳ್ಳುತ್ತಾ ಪಾಕಿಸ್ತಾನದ ಕೋಮು ಪ್ರಚಾರಕ್ಕೆ ಬಲಿಯಾಗದಿರಿ, ಪ್ರಗತಿಯುತ ಪ್ರಜಾರಾಜ್ಯಕ್ಕೆ ಬೆಂಬಲಿಸಿ ಎಂದರು ಅವರು ನೆಹರು ರಾಜ್ಯಕ್ಕೆ ಬೆಂಬಲಿಸುವ ಪ್ರತಿಜ್ಞೆ ಮಾಡಿದ್ದಾರೆ

ಕಾಂಗ್ರೆಸಿನ ನಿರ್ಣಯ

ಆಯಾಯ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಬಹುಮತದಿಂದ ಆರಿಸಿದವರನ್ನೇ ಮಹಾ ಚುನಾವಣೆಗೆ ಉಮೇದುವಾರರನ್ನಾಗಿ ನಿಲ್ಲಿಸಬೇಕೆಂಬ ನಿರ್ಣಯವನ್ನು ಮೊನ್ನೆ ಬೆಂಗಳೂರು ಜಿಲ್ಲೆ ಕಾಂಗ್ರೆಸ್ ಸಮಿತಿ ಶ್ರೀ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ನಿರ್ಣಯ ಮಾಡಿದೆ

ಪತ್ರಿಕಾ ಸಂಮೇಳನ

ಮೈಸೂರು : ಮುಂದಿನ ಮಾಹೆ ದಿನಾಂಕ 7 ರಿಂದ ಪ್ರಾರಂಭವಾಗುವ ಮೈಸೂರು ಸಂಸ್ಥಾನದ ನಾಲ್ಕನೇ ವಯಸ್ಕರ ಶಿಕ್ಷಣ ಸಂಮೇಳನವನ್ನು ಯಶಸ್ವಿಯಾಗಿ ನೆರವೇರಿಸಲು ಸರ್ವಸಾಹಕರಿಸಬೆ ಕೆಂದು ಶ್ರೀ ಎಸ್. ಏ ಮುಂಜುನಾಥ್‌ರವರು ಮೊನ್ನೆ ಪತ್ರಿಕೆಯವರಿಗೆ ತಿಳಿಸಿದರು. 7 ನೇ ತಾ|| ನಗರದಲ್ಲಿ ಎಲ್ಲ ಶಾಲೆಗಳಿಗೂ ರಜಾ ಕೊಡಲಾಗಿದೆಯೆಂದು ಅವರು ತಿಳಿಸಿದರು. ಸಂಸ್ಥಾನಾದ್ಯಂತ ಉಪಾಧ್ಯಾಯರು ಸಂಮೇಳನದಲ್ಲಿ ಭಾಗವಹಿಸಿದರೂ, ಕೆಲಕಕ್ಕೆ ಹಾಜರಾದಂತೆ ಅದನ್ನು ಪರಿಗಣಿಸಲಾಗುವದೆಂದು ಅಧಿಕಾರಿಗಳು ಒರೆದಿರುವದಾಗಿ ಅವರು ತಿಳಿಸಿರುವರು. ಪ್ರಭುಗಳು 7 ನೇ ತಾ| 10 ಗಂಟೆಗೆ ಸಂಮೇಳನ ಉದ್ಘಾಟಿಸುವರು.

ಅವರೆಡೆಗೆ ಹೋಪಬೇಕು

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಮೊನ್ನೆ ಬೆಂಗಳೂರು ರೋಟರಿ ಸಂಸ್ಥೆಯಲ್ಲಿ ಭಾಷಣ ಮಾಡುತ್ತಾ, ತೀವ್ರವಾದ ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿರುವ ಭಾರತ ಬ್ರಿಟನ್, ಅಮೇರಿಕ ಕಡೆ ಸೇರುವದು ಅತ್ಯವಶ್ಯವೆಂದರು.

ವಾರ್ತೆಗಳು

ಬಿಹಾರ್ ಮತ್ತು ಮದರಾಸು ಆಹಾರ ಅಭಾವ ಪ್ರದೇಶಗಳಿಗೆ 15 ನೇ ಆಗಸ್ಟ್ ವರೆಗೆ ನಾನಾ ಜಿಲ್ಲಗಳಲ್ಲಿ ಶೇಖರವಾಗಿರುವ ಧಾನ್ಯ ಸಹಾಯ ವರದಿಯನ್ನು ಮೈಸೂರು ಸರ್ಕಾರ ಪ್ರಕಟನ ಮಾಡಿದೆ

ಜುಲೈ 31 ನೇ ತಾ|| ಗೆ ಕೊನೆಆದ ಪಾಕ್ಷಿಕವೊಂದರಲ್ಲಿ ಮೈಸೂರು ನಗರದಲ್ಲಿ 6 ಆಹಾರ ಆಜ್ಞೋಲ್ಲಂಘನಗಳೂ, ಬೆಂಗಳೂರು ನಗರದಲ್ಲಿ 5 ಆಹಾರ ಆಜ್ಞೋಲ್ಲಂಘನಗಳೂ ನಡೆದು ಶಿಕ್ಷೆ ವಿಧಿಸಲಾಗಿರುವ ಅಂಶ ಮೈಸೂರು ಸರ್ಕಾರಿ ಪ್ರಕಟಣೆ ಇಂದ ಗೊತ್ತಾಗುತ್ತದೆ.

ರಾಜಾಷ್ಟಾಹಿ ಜಿಲ್ಲೆಯ ಸೌಡಾರ್ ಎಂಬಲ್ಲಿ ಮೊನ್ನೆ ಪೂರ್ವ ಪಾಕೀಸ್ತಾನ ಗವರ್ನರ್ ಮುಲ್ಲಿಕ್ ಫಿರೋಜ್ ಖಾರ್ಸೂರ್, ಭಾರತದ ಹಿಂದೂಗಳೊಡನೆ ಗಡಿನಾಡಿನ ಗಫಾರ್ ಖಾನ್‌ರು ಪಾಕಿಸ್ತಾನದ ಮುಸ್ಲಿಮರಿಗಿಂತ ಅಧಿಕ ಮೈತ್ರಿಯಲ್ಲಿರುವದರಿಂದ ಅವರು ಇಂದೀ ಖಾನೆಯಲ್ಲಿರುವರೆಂದು ತಿಳಿಸಿದರು ಹೀಗೆಂದು ಡಾಕ್ಕಾ ವಾರ್ತೆ ತಿಳಿಸುತ್ತದೆ

ಜಸ್ಟಿಸ್ ಬಸೀದ್ ಅಹಮದ್‌ರವರು ಮೊನ್ನೆ ಮದರಾಸಿನ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಪಾಕಿಸ್ತಾನವು ಹಿಂದೀ ಮುಸ್ಲಿಮರಿಗೆ ಗಂಡಾಂತರಕಾರಿಯಾಗಿದೆಯೆಂದು ತಿಳಿಸಿದರು.

ಅಶೋಕ ಮೆಹತ ನುಡಿ

ಶ್ರೀಗಳಾದ ನೆಹರು, ತಾಂಡ್ಯ ಅವರ ಸ್ಪಷ್ಟವಾಗಿ ತಮ್ಮ ಭಿನ್ನತೆ ಇಡುತ್ತಿರುವದು ಸರಿಯಲ್ಲವೆಂದು ಬೊಂಬಾಯಿನಲ್ಲಿ ಶ್ರೀ ಅಶೋಕಮೆಹತ ತಿಳಿಸಿದ್ದಾರೆ.

ಪೌರಸಭೆ

ಮೈಸೂರು : ಶೀಟು ನರಸಿಂಹ ಅಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಈದಿ 31 ನೇ ತಾ|| ಮಧ್ಯಾಹ್ನ 4 ಗಂಟೆಗೆ ಪೌರಸಭೆಯ ಸಾಧಾರಣ ಅಧಿವೇಶನ ಸಮಾವೇಶವಾಗುತ್ತದೆ

ಕನ್ನೇಗೌಡನ ಕೊಪ್ಪಲಿನಲ್ಲಿ ಸೂಕ್ತ ಜಾಗದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ರೇಡಿಯೋ ಬೂತ್ ಒಂದನ್ನು ಸ್ಥಾಪಿಸಬೇಕೆಂದು ಡಾ|| ಬಿ. ಜೆ. ದಾಸ್ ರವರು ನಿರ್ಣಯ ಕಳಿಸಿರುವರು.

ರಣಜಿತ್

ಅಮೋಘ 3 ನೇ ವಾರ

ಮಧುಬಾಲ, ಜ್ಯೋಮನಾಥ್, ನಟಿಸಿರುವ

ಮನಮೋಹನ ಹಿಂದಿ ಚಿತ್ರ

ಬಾದಲ್

B A D A L

ಪ್ರತಿ ದಿನ 3 ಪ್ರದರ್ಶನಗಳು

ಉಡ್‌ಲಾಂಡ್ಸ್ 24-8-51 ರಿಂದ

Soudaagar ಸೌದಾಗರ್

ಪಾತ್ರ— ರೇಹನಾ, ನಜೀರ್‌ಖಾನ್, ಸೂರ್ಯಪ್ರಕಾಶ್ ಚೌಧರಿ, ಬಾಡ್ಡು ಅದ್ವಾನಿ

ಹಾಡುಗಳು — ಸಂತೋಷಿ ಸಂಗೀತ — ರಾಮಚಂದ್ರ

ಸೊಗಸಾದ ಹಿಂದಿ ಚಿತ್ರ] [ಪ್ರತಿ ದಿನ 3 ಪ್ರದರ್ಶನಗಳು

OPERA Aug. 24 th

M A C B E T H

(William Shakespeare's Play)

Starring— Orson Welle, Jeanette Nolan

M

ಬಹು ದಿವಸಗಳಿಂದಲೂ ಎದುರು ನೋಡುತ್ತಿರುವ ನಿಮ್ಮ ಮೆಚ್ಚಿನ ಚಿತ್ರವು ಇಂದಿರ

ಮೋತಿಲಾಲ್ ಟಾಕೀಸ್

ಮಂಡಿ ಮೊಹಲ್ಲ × ಮೈಸೂರು

26-8-51 ರಿಂದ

ಆಮೋಘ ಪ್ರಾರಂಭ

ಜಮಿನಿಯವರ ಮಹೋನ್ನತ ಹಿಂದಿ ಚಿತ್ರ —

ಮಂಗಳ MANGALA

ಪಾತ್ರ : ಭಾನುಮತಿ, ರಂಜಿತ್, ಡೇವಿಡ್, ಆಗ, ಬದರಿಪ್ರಸಾದ್

W



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,

ಭದ್ರಾವತಿ.

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್

Edited, Printed and Published by M. S. Krishna Rao, at the Satyavadi Press Chamrajpuram Mysore